ಶ್ರೀ ಕೆ. ಎಚ್. ಕುರಡಗಿ.—ಈ ಯೋಜನೆ ಸಲುವಾಗಿ ಎಷ್ಟು ಹಣ ತೆಗೆದಿಡಲಾಗಿದೆ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈ ಕ್ಷಾಮ ಪೀಡಿತ ಪ್ರದೇಶದ ಕೆಲಸವನ್ನು ಎರಡು ಮೂರು ಹಂತಗಳಲ್ಲಿ ತೆಗೆದುಕೊಳ್ಳಲಾಗಿದೆ. ಈ ಭಾಗಕ್ಕೆ ಒಟ್ಟು 39 ರಸ್ತೆಗಳ ಕೆಲಸ ಮತ್ತು 11 ಕೆರೆಗಳ ಕೆಲಸಗಳಿಗೆ ಮೊಟ್ಟಮೊದಲು 22,14,698 ರೂಪಾಯಿ ಮಂಜೂರಾಗಿತ್ತು. ಅದರಲ್ಲಿ 10,07,232 ರೂಪಾಯಿ ಖರ್ಚಾಗಿದೆ. ಇದರ ಜೊತೆಗೆ ತಕಾವಿ ಸಾಲ ಒಂದು ಲಕ್ಷ 10 ಸಾವಿರ ರೂಪಾಯಿ, ಹುಲ್ಲು ಕೊಳ್ಳಲು 30 ಸಾವಿರ ರೂಪಾಯಿ ಕೊಡಲಾಗಿದೆ.

ಶ್ರೀ ಕೆ. ಎಚ್. ಕುರಡಗಿ.—ಈ ಭಾಗದಲ್ಲಿ ಶಾಶ್ವತವಾದ ಪರಿಹಾರ ದೊರಕಿಸಲು ಬರಗಾಲ ಕಾಂಗಾರಿಯೇನಾದರೂ ಮಾಡುತ್ತಿರುವರೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈ ಪ್ರದೇಶದಲ್ಲಿ 64 ಫ್ಯಾಮಿನ್ ಬಾಬಿನ ಕೆಳಗೆ ಖರ್ಚು ಮಾಡುವುದರ ಜೊತೆಗೆ ಟಿ.ಪಿ.ಎ.ಪಿ. ಪ್ರೋಗ್ರಾಂ ಬೇರೆ ಇದೆ. ಅದರ ಪ್ರಕಾರ ಕೂಡ ಕೆಲಸಗಳು ಪ್ರಾರಂಭವಾಗಿವೆ. ಕಮ್ಯೂನಿಕೇಷನ್ನಿಗೆ 11,86,379 ರೂಪಾಯಿ, ಇರಿಗೇಷನ್ನಿಗೆ 3 ಲಕ್ಷ 69 ಸಾವಿರ ರೂಪಾಯಿ, ಅಫಾರೆಸ್ಟೇಷನ್ನಿಗೆ 16,480 ರೂಪಾಯಿ ಖರ್ಚುಮಾಡಬೇಕು ಎಂದು ಕೆಲಸ ನಡೆಯುತ್ತಿದೆ.

ಶ್ರೀ ಟಿ. ಎಂ. ಮಂಜುನಾಥ.—ರೆಗ್ಯುಲೇಟೆಡ್ ಮಾರ್ಕೆಟ್ ಯೋಜನೆ ಕೈಕೊಳ್ಳಬೇಕೆಂದಿರುವುದಾಗಿ ಉತ್ತರದಲ್ಲಿ ತಿಳಿಸಲಾಗಿದೆ. ಇದಕ್ಕೆ ಹಣ ಕೊಡುವವರು ಯಾರು ? ನಾಲ್ಕನೆಯ ಯೋಜನೆಗೂ ಬರಗಾಲದ ಕ್ಷಾಮ ಕಾಂಗಾರಿಗೂ ಸಂಬಂಧವೇನು ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಉತ್ತರ ಸ್ಪಷ್ಟವಾಗಿದೆ. ನಾಲ್ಕನೆ ಯೋಜನೆಯಂತೆ ಕೆಲಸ ನಡೆಯುವುದು, ಅದಕ್ಕೆ ಹಣ ಕೊಡಲಾಗಿದೆ.

COMMUNITIES IN THE LIST OF SCHEDULED CASTES/ SCHEDULED TRIBES

157. Sri J. L. KABADE (Ballolli).—

Will the Minister for Community Development and Social Welfare be pleased to state :—

(*a*) whether Government is aware of the fact that there are certain communities which are considered as Scheduled Castes in old Mysore areas only and are not considered so, in other areas ;

(*b*) the action Government has taken to remove this anomaly ;

(*c*) the fundamental basis to include the caste in the proposed list recommended by this Government ?

Sri M. MALLIKARJUNA SWAMY (Minister for Community Development and Social Welfare) —

(*a*) Yes.

(*b*) The Government of India have been requested to remove the area restrictions.

(*c*) Only those castes which were educationally and economically backward and were subject to tangible local disabilities based on the custom of untouchability have been recommended for inclusion in the list of Scheduled Castes.

ಶ್ರೀ ಜೆ. ಎಲ್. ಕಬಾಡಿ.—ಈಗ ಸರ್ಕಾರದವರು ಪಟ್ಟಿಯಲ್ಲಿ ಸೇರಿಸುವುದಕ್ಕೆ ಶಿಫಾರ್ಸು ಮಾಡಿ ಕಳುಹಿಸಿರತಕ್ಕ ಜಾತಿಗಳು ಯಾವುವು ?

† ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ.—ನಾವು ಸರ್ಕಾರಕ್ಕೆ ಸುಮಾರು ಮೂರು ಸಾರ್ತಿ ಪಟ್ಟಿಗಳನ್ನು ಕಳುಹಿಸಿಕೊಟ್ಟಿದ್ದೇವೆ. ನಾವು ಹಾಗೆ ಕಳುಹಿಸಿರತಕ್ಕ ಪಟ್ಟಿಗಳಲ್ಲಿ ಅಂದರೆ ಷೆಡ್ಯೂಲ್ ಕ್ಯಾಸ್ಟ್ ಪಟ್ಟಿಯಲ್ಲಿ ಸುಮಾರು 51 ಮತ್ತು ಷೆಡ್ಯೂಲ್ ಟ್ರೈಬ್ಸ್ ಪಟ್ಟಿಯಲ್ಲಿ ಸುಮಾರು 40 ಜಾತಿಗಳ ಹೆಸರನ್ನು ಸೇರಿಸಲಾಗಿದೆ. ನಮ್ಮ ಸರ್ಕಾರ ಇಲ್ಲಿಂದ ಆ ಪಟ್ಟಿಗಳನ್ನು ಒಂದಾವರ್ತಿ 1963 ರಲ್ಲೂ, ಆದಾದನಂತರ ಮತ್ತೆ 1965 ರಲ್ಲೂ ಮತ್ತೆ 1967 ರಲ್ಲೂ ಲೋಕರ್ ಕಮಿಟಿಯವರು ಆ ಪಟ್ಟಿಗಳಲ್ಲಿ ಕೆಲವನ್ನು ಸೇರಿಸುವುದಕ್ಕೂ ಮತ್ತು ಕೆಲವನ್ನು ತೆಗೆದುಹಾಕುವುದಕ್ಕೂ ಮತ್ತೆ ಕೆಲವನ್ನು ಒಂದು ಪಟ್ಟಿಯಿಂದ ಇನ್ನೊಂದಕ್ಕೆ ಬದಲಾಯಿಸುವುದಕ್ಕೂ ಶಿಫಾರ್ಸನ್ನು ಮಾಡಿ ಕಳುಹಿಸಲಾಗಿದೆ. ಆ ಪಟ್ಟಿ ಈಗ ಪಾರ್ಲಿಯಮೆಂಟಿನ ಮುಂದೆ ಇರುತ್ತದೆ.

2-30 P.M.

ಶ್ರೀ ಜೆ. ಎಲ್. ಕಬಾಡಿ.—ನಾನು ಕೇಳಿದ ಪ್ರಶ್ನೆ ಯಾವ ಯಾವ ಜಾತಿಗಳನ್ನು ಹೊಸದಾಗಿ ಪಟ್ಟಿಗಳಲ್ಲಿ ಸೇರಿಸುವುದಕ್ಕೆ ಶಿಫಾರ್ಸನ್ನು ಮಾಡಲಾಗಿದೆ ಎಂದು ನನ್ನ ಪ್ರಶ್ನೆ. ಉದಾಹರಣೆಗೆ ಹೇಳುವುದಾದರೆ ಈ ದಿವಸ ಹಳೇ ಮೈಸೂರು ಏರಿಯಾದಲ್ಲಿ ಒಡ್ಡರು ಮತ್ತು ಲಂಬಾಣಿ ಜನಾಂಗಗಳನ್ನು ಷೆಡ್ಯೂಲ್ ಕ್ಯಾಸ್ಟಿನಲ್ಲಿ ಸೇರಿಸಿದ್ದಾರೆ. ಆದರೆ ಮುಂಬೈ ಕರ್ಣಾಟಕ ಹೈದ್ರಾಬಾದ್ ಕರ್ಣಾಟಕ ಪ್ರದೇಶದಲ್ಲಿ ಆ ಜನಾಂಗಗಳನ್ನು ಆ ಪಟ್ಟಿಯಲ್ಲಿ ಸೇರಿಸಿಲ್ಲ. ಅಲ್ಲಿ ಹೀಗೆ ಇಲ್ಲದವರು ಇಲ್ಲಿ ಇದ್ದಾರೆ. ಅದಕ್ಕಾಗಿ ನಾನು ಕೇಳಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ.—ನಾವು ಈಗ ಕೇಂದ್ರ ಸರ್ಕಾರಕ್ಕೆ ಶಿಫಾರ್ಸು ಮಾಡಿರತಕ್ಕ ಪಟ್ಟಿಯಲ್ಲಿ ಈ ಪ್ರಾದೇಶಿಕ ನಿರ್ಬಂಧನನ್ನು ತೆಗೆದು ಹಾಕಬೇಕೆಂದು ಶಿಫಾರ್ಸು ಮಾಡಿದ್ದೇವೆ. ಮತ್ತು ಜೋಳಿ ಮತ್ತು ಲಂಬಾಣಿ ಜನಾಂಗದವರನ್ನು ಷೆಡ್ಯೂಲ್ಡ್ ಕ್ಯಾಸ್ಟಿನಿಂದ ಬದರಾಯಿಸಿ ಷೆಡ್ಯೂಲ್ಡ್ ಟ್ರೈಬ್ಸ್‌ನಲ್ಲಿ ಸೇರಿಸಬೇಕೆಂದು ಶಿಫಾರ್ಸುಮಾಡಿದ್ದೇವೆ.

ಶ್ರೀ ಜೆ. ಎಲ್. ಕಬಾಡಿ.—ಈಗತಾನೇ ಮಾನ್ಯ ಮಂತ್ರಿಗಳು 1963, 1965 ಮತ್ತು 1967 ಹೀಗೆ ಮೂರಾವರ್ತಿ ಕೇಂದ್ರಕ್ಕೆ ಕೆಲವು ಜಾತಿಗಳನ್ನು ಹೊಸದಾಗಿ ಸೇರಿಸುವುದಕ್ಕೂ ಮತ್ತು ಕೆಲವನ್ನು ಪಟ್ಟಿಯಿಂದ ಕಿತ್ತುಹಾಕುವುದಕ್ಕೂ ಶಿಫಾರ್ಸು ಮಾಡಿದ್ದೇವೆಂದು ಹೇಳಿದರು. ಹಾಗೆ ಸರ್ಕಾರದವರು ಮಾಡಿರತಕ್ಕ ಶಿಫಾರ್ಸಿಗೆ ಯಾವುದಾದರೂ ಆಧಾರವುಂಟೇ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.— ಸರ್ಕಾರದವರು ಆಗಾಗ್ಗೆ ಹೀಗೆ ಶಿಫಾರ್ಸು ಮಾಡುತ್ತಾ ಹೋಗುತ್ತಾರೆ. ಆವಶ್ಯಕತೆಯ ಕಳಂಕಕ್ಕೆ ತುತ್ತಾಗಿದ್ದರೂ ಸಹ ಇಲ್ಲಿಯತನಕ ಯಾವ ಜನಾಂಗವನ್ನು ಈ ಪಟ್ಟಿಯಲ್ಲಿ ಸೇರಿಸದೆ ಕೈಬಿಡಲಾಗಿದೆಯೋ ಅಂಥಾ ಜನಾಂಗವನ್ನು ಸೇರಿಸುವುದಕ್ಕೆ ಶಿಫಾರ್ಸು ಮಾಡಿದ್ದೇವೆ.

Sri C. M. ARUMUGAM—I would like to know from the Government whether they have dropped any castes from the list of Scheduled Castes; if so, the names of the castes? Or if they have added any castes, the names of those castes?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಸುಮಾರು 6—7—8 ಜಾತಿಗಳನ್ನು ಯಾರು ಅವ್ಯವಶ್ಯತೆಗೆ ಒಳಪಡುವುದಿಲ್ಲವೋ ಅಂಥವುಗಳನ್ನು ಷೆಡ್ಯೂಲ್ಡ್ ಕ್ಯಾಸ್ಟ್ ಪಟ್ಟಿಯಿಂದ ತೆಗೆದು ಹಾಕಬೇಕೆಂದು ಕೇಂದ್ರ ಸರ್ಕಾರಕ್ಕೆ ಶಿಫಾರ್ಸು ಮಾಡಿದ್ದೇವೆ.

Sri C. M. ARUMUGAM.—The scheduled castes list was prepared under the 1935 Act and it was accepted under the Presidential Order in the year 1950. Now I am told that the Government of Mysore have recommended eliminating certain castes from the list of Scheduled Castes. If it is so, I would like to know the names of the castes that have been eliminated and also the names of those castes which have been included in the list of Scheduled Castes?

Sri M. MALLIKARJUNASWAMY.—I want notice to answer the question.

Sri C. M. ARUMUGAM.—This is a matter which has already been given notice of and the question asked is very specific. The question asked is: "Whether Government is aware of the fact that there are certain communities which are considered as Scheduled Castes in old Mysore areas only and are not considered so, in other areas; and (b) the action Government has taken to remove this anomaly;" Therefore the question asked is very specific and the Government cannot plead for notice to answer this question.

Sri D. DEVARAJ URS—The question asked is very clear and the answers furnished are also very clear. The Hon. Member wants to know the names of the communities which have been either included or excluded for which the Hon'ble Minister for Social Welfare has asked for notice. He does not want to withhold any information which he has in his possession. I remember very well that Bovies or Vodders were excluded from the Scheduled Castes. Now I remember these castes have been removed from the list of Scheduled Castes. They have now been recommended to be included in the Scheduled Tribes. I remember these two communities distinctly. If the Hon'ble Member wants to know the names of the communities, we will give their names also but that is not ready now.

Sri C. M. ARUMUGAM.—The Hon. Member who answers a certain question must visualise which are the supplementaries that would arise and he must be prepared to answer them. The Hon. Minister is arrested by a number of officers who would supply him the information. If he says that the information is not ready, that means he is not discharging his duties correctly and to the appreciation of our Assembly.

Sri H. D. DEVE GOWDA.—He has said that 8 communities have been excluded from the list. He should not plead his inability to reveal the names of those communities.

Sri S. M. KRISHNA.—There is no harm in pleading for notice.

Sri C. M. ARUMUGAM.—I know Sri S. M. Krishna is in a position to answer any supplemntary under the sun; I can give him this compliment.

Sri D. DEVARAJ URS.—My friend Sri Arumugam imagines certain things which are beyond the sun.

Sri S. M. YAHYA.—Has it come to the notice of the Government that Magaveer community in South Canara is considered as a scheduled caste whereas the same community in North Canara is not considered as Scheduled Caste?

Sri M. MALLIKARJUNASWAMY—They are not considered as Scheduled Caste.

Sri M. S. KRISHNA.—In answer to (c) you have clarified the basis to include the communities. May I knew whether this definition has been accepted by the Government of India because in this definition only those castes which are tangible can be included. May I know what is meant by "tangible local disabilities based on the custom of untouchability have been recommended for inclusion in the list of Scheduled Castes?"

ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ.—ಯಾರು ನಿಜವಾಗಿಯೂ ಅಸ್ಪೃಶ್ಯತೆಯ ಕಳಂಕಕ್ಕೆ ತುತ್ತಾಗಿ ನರಳುತ್ತಿದ್ದಾರೋ ಅಂಥವರನ್ನು ಪಟ್ಟಿಯಲ್ಲಿ ಸೇರಿಸದೆ ಕೈಬಿಟ್ಟಿದ್ದರೆ ಅವರನ್ನು ಈಗ ಸೇರಿಸಬೇಕಾಗಿದ್ದು ಸಂಪ್ರದಾಯ. ಅದರಂತೆ ಶಿಫಾರ್ಸುಮಾಡಿದ್ದೇವೆ. ನಮ್ಮ ಶಿಫಾರ್ಸನ್ನು ಕೇಂದ್ರ ಸರ್ಕಾರದವರು ಅಂಗೀಕರಿಸಿದ್ದಾರೆ.

ಶ್ರೀ ಎಸ್. ಬಿ. ನಾಯಕ್.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಸ್ಪೃಶ್ಯತೆಯ ಪದ್ಧತಿಯಿಂದಾಗಿ ಅನುಸೂಚಿತ ಜಾತಿಗೆ ಒಳಪಟ್ಟ ಪಂಗಡದವರನ್ನು ಹರಿಜನರೆಂದು ನಿಷ್ಕರ್ಷೆಮಾಡಿ ಆ ಒಂದು ಪಟ್ಟಿಯಲ್ಲಿ ಸೇರಿಸುವಾಗ ಉತ್ತರ ಕನ್ನಡಜಿಲ್ಲೆಯಲ್ಲಿ ಆ ರೀತಿಯಾಗಿ ಅವರನ್ನು ಸೇರಿಸಿಕೊಳ್ಳುವುದಕ್ಕಾಗುವುದಿಲ್ಲವೆಂದು ಯಾವ ಒಂದು ಉದ್ದೇಶದಿಂದ ಹೇಳುತ್ತೀರಿ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಅಲ್ಲಿರತಕ್ಕವರು ಅಸ್ಪೃಶ್ಯ ಜನಾಂಗದವರು ಅಲ್ಲ ಎಂಬುದಾಗಿ ಮೈಸೂರು ಸರ್ಕಾರದವರು ಚೆನ್ನಾಗಿ ಪರಿಶೀಲನೆಮಾಡಿ ಅವರನ್ನು ಸೇರಿಸಿಲ್ಲ. ನಾವು ಅದಕ್ಕೆ ಶಿಫಾರಸ್ಸು ಮಾಡಿಲ್ಲ. ಆದರೂ ಕೂಡ ಈಗ ಮಾನ್ಯ ಸದಸ್ಯರ ಗಮನಕ್ಕೆ ಒಂದು ವಿಷಯವನ್ನು ತರಬೇಕಾಗಿದೆ. ಲೋಕೂರ್ ಸಮಿತಿಯವರು ಅವರನ್ನು ಅಸ್ಪೃಶ್ಯರು ಎಂಬುದಾಗಿ 1967ರಲ್ಲಿಯೇ ನಿಷ್ಕರ್ಷೆಮಾಡಿ ಹರಿಜನರೊಳಗೇ ಸೇರಿಸಿದ್ದಾರೆ.

ಶ್ರೀ ಸಿ. ಬೈರೇಗೌಡ.—ಕೂರ್ಗ್ ಪ್ರದೇಶದಲ್ಲಿರತಕ್ಕ ಮೇದರ್ ಕಮ್ಯೂನಿಟಿ ಬಗ್ಗೆ ಇತರ ಕಡೆಗಳಲ್ಲಿ ಯಾವ ಡಿಸ್ಟಿಂಕ್ಷನ್ ಇಲ್ಲದೇ ಇರುವುದು ಸರ್ಕಾರಕ್ಕೆ ಗೊತ್ತಿದೆಯೇ? ಆ ರೀತಿ ಇದ್ದರೆ ಅವರನ್ನೂ ಸಹ ಷೆಡ್ಯೂಲ್ಡ್ ಕ್ಯಾಸ್ಟ್‌ನೊಳಗೆ ಸೇರಿಸುವುದಕ್ಕೆ ತಕ್ಕಕ್ರಮವನ್ನು ತೆಗೆದುಕೊಳ್ಳುತ್ತೀರಾ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಮೇದರ್ ಕಮ್ಯೂನಿಟಿ ಷೆಡ್ಯೂರ್ಡ್ ಕ್ಯಾಸ್ಟಿನಲ್ಲಿ ಬರುವುದಿಲ್ಲ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಅಸ್ಪೃಶ್ಯತೆ ಎಂಬ ಅಂಟೂಪಾಡ್ಯದಿಂದ ನರಳುತ್ತಿರುವ 51 ಜಾತಿಯವರನ್ನೂ ಮತ್ತು ಅಸ್ಪೃಶ್ಯತೆಯಿಂದ ನರಳದೆ ಇರತಕ್ಕ ಹಾಗೂ ಶೈಕ್ಷಣಿಕವಾಗಿ, ಆರ್ಥಿಕವಾಗಿ ಹಿಂದುಳಿದಿರತಕ್ಕವರಲ್ಲ 40 ಜಾತಿಯವರನ್ನೂ ಷೆಡ್ಯೂರ್ಡ್ ಕ್ಯಾಸ್ಟಿನಲ್ಲಿ ಸೇರಿಸಿದ್ದೇವೆ ಹಾಗೂ ಶಿಫಾರಸು ಮಾಡಿದ್ದೇವೆಂದು ಹೇಳುತ್ತೀರಿ. ಸುಮಾರು 1963-64-65ನೇ ಇಸವಿಯಿಂದಲೂ ಶಿಫಾರಸು ಮಾಡುತ್ತಿದ್ದೇವೆಂದು ಕೇಳುತ್ತಿದ್ದೀರಿ. ಆ ಶಿಫಾರಸುಗಳನ್ನು ಮಾಡುವುದಕ್ಕೆ ಮೊದಲು ಆ 51 ಜಾತಿಯವರ ಅಂಕಿಅಂಶಗಳನ್ನು ಏನಾದರೂ ಶೇಖರಿಸಿದ್ದೀರಾ? ಅಥವಾ ಆ 40 ಜಾತಿಯವರ ಅಂಕಿಅಂಶಗಳನ್ನು ಶೇಖರಿಸಿದ್ದೀರಾ? ಆ ಎರಡರ ಅಂಕಿಅಂಶಗಳನ್ನು ಕೊಡುವುದಕ್ಕಾಗುತ್ತದೆಯೇ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಮಾನ್ಯ ಸದಸ್ಯರು ಪ್ರತ್ಯೇಕ ಪ್ರಶ್ನೆಯನ್ನು ಕೇಳಿದರೆ, ಅದಕ್ಕೆ ಉತ್ತರವನ್ನು ಒದಗಿಸುತ್ತೇನೆ. 1956ರಲ್ಲಿ ರೀ-ಆರ್ಗನೈಜೇಷನ್ ಆಗುವುದಕ್ಕೆ ಮೊದಲು ಈ ಜಾತಿಗಳ ಬಗ್ಗೆ ಒಂದು ಮಾಡಿಫಿಕೇಷನ್ ಆರ್ಡರ್ ಹೊರಡಿಸಿದ್ದಾರೆ. ಆ ಆರ್ಡರ್‌ನ ಸೆಕ್ಷನ್ 14ರ ಪ್ರಕಾರವಾಗಿ ತಕ್ಕ ಕ್ರಮವನ್ನು ತೆಗೆದುಕೊಳ್ಳಲಾಗಿದೆ.

ಶ್ರೀ. ಎಂ. ಬಿ. ರಾಮಸ್ವಾಮಿ.—ಗ್ರಾಮಾಂತರ ಪ್ರದೇಶಗಳಲ್ಲಿ ಅಸ್ಪೃಶ್ಯರಲ್ಲ ಎಂಬುದಾಗಿ ಹೇಳುವವರನ್ನು ತಾವು ಶಿಫಾರಸು ಮಾಡಿರುವ ಪಟ್ಟಿಯಲ್ಲಿದ್ದರೆ, ಅಂತಹವರನ್ನು ಆ ಪಟ್ಟಿಯಿಂದ ತೆಗೆದುಹಾಕುವುದಕ್ಕೆ ತಾವೇನಾದರೂ ಮನಸ್ಸು ಮಾಡಿದ್ದೀರಾ? ಅಥವಾ ಅಂತಹವರ ಬಗ್ಗೆ ಇದುವರೆಗೆ ಏನಾದರೂ ಮಾಹಿತಿ ಪಡೆದಿದ್ದೀರಾ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಅವನ್ನೆಲ್ಲಾ ಪರಿಶೀಲನೆ ಮಾಡಿ ಕೇಂದ್ರಸರ್ಕಾರಕ್ಕೆ ಶಿಫಾರಸು ಮಾಡುವಾಗ ನಮ್ಮ ಪ್ರಾರ್ಥನೆಯನ್ನು ನಲ್ಲಿಸಿದ್ದೇವೆ. ಈಗ ಅದಿನ್ನೂ ಪಾರ್ಲಮೆಂಟ್ ಮುಂದೆ ಬಂದು ಅಲ್ಲಿ ಒಂದು ತೀರ್ಮಾನವನ್ನು ತೆಗೆದುಕೊಳ್ಳಬೇಕು. ಇಡೀ ರಾಜ್ಯದಲ್ಲಿಯೇ

ಅಲ್ಲ, ಭಾರತಾದ್ಯಂತ ಈ ವಿಚಾರದಲ್ಲಿ ವ್ಯತ್ಯಾಸವಿರುವುದರಿಂದ, ಅವರ ಬಗ್ಗೆ ಒಂದು ಯೂನಿಫಾರಂ ಲಿಸ್ಟ್ ಮಾಡಬೇಕೆಂಬ ದೃಷ್ಟಿ ಇರುವುದರಿಂದ ಕೇಂದ್ರಸರ್ಕಾರದವರು ಅದನ್ನು ಪರಿಶೀಲನೆ ಮಾಡುತ್ತಿದ್ದಾರೆ. ಅದು ಈಗಾಗಲೇ ಪಾರ್ಲಿಮೆಂಟ್ ಮುಂದೆ ಇದೆ.

ಶ್ರೀ ಜಿ. ಸಿ. ತಮ್ಮಣ್ಣ.—ಉತ್ತರದಲ್ಲಿ (ಅ) ಉಪಪ್ರಶ್ನೆಗೆ ಪ್ರದೇಶ ನಿರ್ಬಂಧನೆಯನ್ನು ತೆಗೆದುಹಾಕಲು ಭಾರತ ಸರ್ಕಾರದವರನ್ನು ಕೋರಲಾಗಿದೆ ಎಂಬುದಾಗಿ ಹೇಳಿದೆ. ಅದೇನು ಕೋರಿಕೆ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಸ್ಟೇಟ್ ರೀಆರ್ಗನೈಜೇಷನ್ ಆಕ್ಟ್ ಪ್ರಕಾರ ನಾವು ಒಂದು ಲಿಸ್ಟ್ ಮಾಡಿದ್ದೇವೆ. ಈಗಾಗಲೇ ನಾವು ಯಾವ ಒಂದು ಪ್ರಾರ್ಥನೆಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದ್ದೇವೋ ಅದು ಕೇಂದ್ರಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಜೆ. ಎಲ್. ಕಬಾಡಿ.—ಮಾನ್ಯ ಮಂತ್ರಿಗಳು ನಾನು ಕೇಳುವ ಪ್ರಶ್ನೆ ಬಹಳ ಸ್ಪೆಸಿಫಿಕ್ಕಾಗಿ ಇರುವುದರಿಂದ ಅದರ ಬಗ್ಗೆ ಉತ್ತರವನ್ನು ಸರಿಯಾಗಿ ಕೊಡುತ್ತಾರೆಂದು ತಿಳಿದು ಕೇಳುತ್ತಿದ್ದೇನೆ. ಈಗ ಕೆಲವೊಂದು ಜಿಲ್ಲೆಗಳಲ್ಲಿ ಕೆಲವು ಜಾತಿಗಳವರನ್ನು ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ನೊಳಗೆ ಸೇರಿಸಿಲ್ಲ. ಅಂತಹ ಜಾತಿಗಳನ್ನು ಏನಾದರೂ ಕೇಂದ್ರಸರಕಾರಕ್ಕೆ ಶಿಫಾರಸು ಮಾಡಿದ್ದೀರಾ ? ಷೆಡ್ಯೂಲ್ಡ್ ಜಾತಿಯೊಳಗೆ ಕೆಲವು ಜಾತಿಗಳವರನ್ನು ಸೇರಿಸದೆ ತೆಗೆಯಹಾಕಿದ್ದೀರಿ. ಅವು ಯಾವುವು ? ನನ್ನ ಪ್ರಶ್ನೆಗೆ ಉತ್ತರವಾಗಿ ಇತರೇ ಪ್ರದೇಶಗಳಲ್ಲಿ ಕೆಲವು ಕೋಮಿನವರನ್ನು ಅನುಸೂಚಿತ ಜಾತಿಯವರೆಂದು ಪರಿಗಣಿಸದೇ ಇರುವ ವಿಷಯ ಸರ್ಕಾರಕ್ಕೆ ಗೊತ್ತಿದೆಯೆಂದು ಹೇಳುತ್ತೀರಿ. ಈ ಪ್ರಶ್ನೆಗೆ ಮಂತ್ರಿಗಳು ಏಕೆ ಉತ್ತರ ಹೇಳುವುದಕ್ಕೆ ತಯಾರು ಇಲ್ಲವೋ ಗೊತ್ತಿಲ್ಲ. ಉತ್ತರದಲ್ಲಿ ಏಳೆಂಟು ಜಾತಿಗಳನ್ನು ಷೆಡ್ಯೂಲ್ಡ್ ಜಾತಿಯೊಳಗೆ ಸೇರಿಸಿದ್ದೇವೆಂದು ಮಂತ್ರಿಗಳು ಹೇಳಿದರು. ಅವು ಯಾವುವು ? ಮತ್ತೊಂದು ವಿಷಯವನ್ನು ಮಂತ್ರಿಗಳು ಹೇಳಿದರು. ಜಾಯಿಂಟ್ ಸೆಲೆಕ್ಟ್ ಕಮಿಟಿಯವರು ತೀರ್ಮಾನಮಾಡಿದಂತೆ ಶಿಫಾರಸುಮಾಡಿದ್ದೇವೆಂದು. ನೀವು ಜಾಯಿಂಟ್ ಸೆಲೆಕ್ಟ್ ಕಮಿಟಿಯನ್ನು ಯಾವಾಗ ಮಾಡಿದಿರಿ ? ಅದರಲ್ಲಿ ಶಿಫಾರಸು ಮಾಡಿರುವುದು ಏನು ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಮಾನ್ಯ ಸದಸ್ಯರು ಸ್ಪೆಸಿಫಿಕ್ಕಾಗಿ ಪ್ರಶ್ನೆ ಕೇಳಿದರೆ ಅದಕ್ಕೆ ಉತ್ತರ ಹೇಳುತ್ತೇನೆ.

ಶ್ರೀ ಜೆ. ಎಲ್. ಕಬಾಡಿ.—ನಾನು ಈ ವಿಚಾರವಾಗಿ ಅರ್ಧಗಂಟೆಯ ಪ್ರಶ್ನೆಯನ್ನು ಕಳುಹಿಸುತ್ತೇನೆ. ತಾವು ಅದನ್ನು ಈ ಸಭೆಯಲ್ಲಿ ಪುನಃ ತೆಗೆದುಕೊಳ್ಳಲು ಪರ್ಮಿಷನ್ ಕೊಡಬೇಕು.

Sri D. DEVARAJ URS (Chief Minister).—If the Hon. Speaker permits me, I am getting the names of those castes which have been either removed or added and present a list of it to the House through the Hon'ble Speaker.

RESERVATION IN PROMOTIONAL VACANCIES TO S.C. AND S.T.

185. Sri G. PUTTASWAMY (Mudigere).—

Will the Chief Minister be pleased to state :—

(*a*) the percentage of representation in appointment so far given in the Government service in all classes of vacancies for Scheduled Castes and Scheduled Tribes in the State (Departmentwise and classwise and Districtwise in each unit information may be furnished) ;

(*b*) the action taken to maintain the percentage guaranteed under the Constitution ;